# ದಿನಾಂಕ: 02.08.2013ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದವರು :

1. ಶ್ರೀ ಎ.ಕೆ.ಎಂ.ನಾಯಕ್, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು,
2. ಶ್ರೀ ಡಿ.ತಂಗರಾಜ್, ರಾಜ್ಯ ಮಾಹಿತಿ ಆಯುಕ್ತರು,
3. ಶ್ರೀ ಜೆ.ಎಸ್.ವಿರೂಪಾಕ್ಷಯ್ಯ, ರಾಜ್ಯ ಮಾಹಿತಿ ಆಯುಕ್ತರು,
4. ಶ್ರೀ ಎಂ.ಆರ್.ಪೂಜಾರ್, ರಾಜ್ಯ ಮಾಹಿತಿ ಆಯುಕ್ತರು,
5. ಶ್ರೀ ಟಿ.ರಾಮನಾಯಕ್, ರಾಜ್ಯ ಮಾಹಿತಿ ಆಯುಕ್ತರು,
6. ಶ್ರೀ ಚಿಕ್ಕಮುನಿಯಪ್ಪ, ಕಾರ್ಯದರ್ಶಿ.

**ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.**

## 1. ನಿಕಟಪೂರ್ವ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ :

ಈ ಬಗ್ಗೆ ವಿಷಯ ಪ್ರಸ್ತಾಪಿಸಿದ ಆಯೋಗದ ಕಾರ್ಯದರ್ಶಿಗಳು ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಹಳೆಯ ಕಡತಗಳನ್ನು ಹಿಂದಿನ ಸಾಲಿಗೆ ಕೊನೆಗೊಳ್ಳುವಂತೆ ಮುಕ್ತಾಯಗೊಳಿಸಿ ಪುನಃ ಈ ಸಾಲಿನಲ್ಲಿ ಮರು ನೋಂದಣಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, 2008ನೇ ಸಾಲಿನ 52, 2009ನೇ ಸಾಲಿನ 74 ಹಾಗೂ 2010ನೇ ಸಾಲಿನ 06 ಒಟ್ಟು 132 ಕಡತಗಳು ಬಾಕಿ ಇರುವ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಮುಂದುವರೆದು ಮಾತನಾಡುತ್ತಾ, ಬಾಕಿ ಇರುವ ಎಲ್ಲಾ ಕಡತಗಳನ್ನು ಹುಡುಕಿಸಿ, ಪ್ರಸ್ತುತ ಹೋಮ್ ಗಾರ್ಡ್ಸ್ ವತಿಯಿಂದ 08 ಜನ ಸಿಬ್ಬಂದಿಯನ್ನು ನೀಡಲಾಗಿದ್ದು ಅವರುಗಳ ಸಹಕಾರದಿಂದ ಬಾಕಿ ಇರುವ ಎಲ್ಲಾ ಕಡತಗಳನ್ನು ಅಪ್‌ಲೋಡ್ ಮಾಡಲಾಗುವುದೆಂದು ಸಭೆಗೆ ತಿಳಿಸಿದರು.

ಇದಕ್ಕೆ ಸ್ಪಂದಿಸಿದ ಮುಖ್ಯ ಮಾಹಿತಿ ಆಯುಕ್ತರು, ಕೆಲವು ಪ್ರಕರಣಗಳಲ್ಲಿ ಕಂಡು ಬಂದಿರುವ ನ್ಯೂನತೆಗಳ ಬಗ್ಗೆ ತಿಳಿಸುತ್ತಾ, (1) ಕಡತ ಮುಕ್ತಾಯವಾಗಿದ್ದರೂ ಸಹ ಗಣಕೀಕೃತವಾಗಿ ದಾಖಲಾಗಿರುವುದಿಲ್ಲ. (2) ನೋಟೀಸ್ ಹೊರಡಿಸಲಾಗಿದ್ದು ನಂತರ ಆಗಿರುವ ಕ್ರಮಗಳ ಬಗ್ಗೆ ನಡವಳಿಗಳು ಲಭ್ಯವಿರುವುದಿಲ್ಲ. ಉದಾ: ಹಿಂದಿನ ಮುಖ್ಯ ಮಾಹಿತಿ ಆಯುಕ್ತರಾದ ಶ್ರೀ ಕೆ.ಕೆ.ಮಿಶ್ರಾರವರು ನಡೆಸಿದ ಒಂದು ಪ್ರಕರಣದಲ್ಲಿ ನೋಟೀಸ್ ನೀಡಲಾದ ನಂತರದ ಕ್ರಮಗಳನ್ನು ನಮೂದಿಸಿರುವುದಿಲ್ಲ. ಕೆಲವು ಪ್ರಕರಣಗಳಲ್ಲಿ ದಂಡ ವಿಧಿಸಲಾಗಿದ್ದು, ದಂಡ ಪಾವತಿಯಾದ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲವಾದ್ದರಿಂದ ಕಡತವನ್ನು ಹಾಗೇಯೇ ಬಾಕಿ ಉಳಿದುಹೋಗಿದೆ. ಆದುದರಿಂದ ಬಾಕಿ ಇರುವ ಎಲ್ಲಾ ಹಳೆಯ ಕಡತಗಳನ್ನು ಭೌತಿಕವಾಗಿ ಪರಿಶೀಲಿಸಿ ನಂತರ ಕೋರ್ಟ್ ಹಾಲ್‌ಗಳಿಗೆ ಹಂಚಿಕೆ ಮಾಡುವಂತೆ ಸೂಚಿಸಿದರು.

ನಿರ್ಣಯ : **ಬಾಕಿ ಇರುವ 132 ಹಳೆಯ ಕಡತಗಳನ್ನು ಹುಡುಕಿಸಿ ಗಣಕೀಕರಣಗೊಳಿಸುವುದು ಮತ್ತು ಬಾಕಿ ಇರುವ ಕಡತಗಳನ್ನು ಪರಿಶೀಲಿಸಿದ ನಂತರ ಕೋರ್ಟ್ ಹಾಲ್‌ಗಳಿಗೆ ಹಂಚಿಕೆ ಮಾಡುವುದು.**

ಕ್ರಮ : ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳು, ಶಾಖಾಧಿಕಾರಿ.

## 2. ಹೊರಗುತ್ತಿಗೆ ನೌಕರರ ನೇಮಕಾತಿಗಾಗಿ ಏಜೆನ್ಸಿ ನಿಗಧಿಪಡಿಸುವ ಬಗ್ಗೆ

ಈ ವಿಷಯವನ್ನು ಕಾರ್ಯದರ್ಶಿಗಳು ಸಭೆಯ ಮುಂದೆ ಮಂಡಿಸುತ್ತಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯವರು ಬರೆದಿರುವ ಪತ್ರವನ್ನು ಸಭೆ ಗಮನಕ್ಕೆ ತಂದರು. ಟೆಂಡರ್ ಮೂಲಕವೇ ಏಜೆನ್ಸಿಯನ್ನು ನಿಗಧಿಪಡಿಸಿ ಕಾರ್ಮಿಕ ಇಲಾಖೆ ನಿಗಧಿಪಡಿಸಿರುವ ದರಕ್ಕಿಂತಲೂ ಕಡಿಮೆಯಾಗದಂತೆ ಮತ್ತು ಸ್ಪರ್ಧಾತ್ಮಕ ದರವನ್ನು ನಮೂದಿಸುವ ಹೊರಗುತ್ತಿಗೆ ಏಜೆನ್ಸಿಗೆ ಆದೇಶ ನೀಡಬೇಕಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಸ್ಪಂದಿಸಿದ ಆಯುಕ್ತರಾದ ಶ್ರೀ ಡಿ.ತಂಗರಾಜ್‌ರವರು ಹೊರಗುತ್ತಿಗೆ ನೌಕರರಿಗೆ ಸಂಬಂಧಿಸಿದಂತೆ ಟೆಂಡರ್ ಕರೆದು ದರ ನಿಗಧಿಪಡಿಸಬೇಕೆಂದು ಸರ್ಕಾರ ಹೊರಡಿಸಿರುವ ಆದೇಶದಂತೆ ಟೆಂಡರ್ ಕರೆದು ಟೆಂಡರ್ ಪ್ರಕಿಯೆ ಮುಗಿಸಿ ಮುಂದಿನ ಸಭೆಗೆ ಸಲ್ಲಿಸಲು ಸೂಚಿಸಿದರು.

ತದನಂತರ ಶ್ರೀ ವಿರುಪಾಕ್ಷಯ್ಯ ಆಯುಕ್ತರು ಈ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಕಾರ್ಯದರ್ಶಿಯವರು ಸ್ಪಷ್ಟೀಕರಣ ನೀಡಿ ದಿನಗೂಲಿಯ ರೀತಿಯಲ್ಲಿ ಅಥವಾ ಕಾಂಟ್ರಾಕ್ಟ್ (ಗುತ್ತಿಗೆ) ಆಧಾರದಲ್ಲಿ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಹೊರಗುತ್ತಿಗೆ (Out sourcing) ಮೂಲಕವೇ ಆಯೋಗಕ್ಕೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕಾಗಿದ್ದು ಇವರ ವೇತನಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು. ಮುಂದಿನ ಹಂತದಲ್ಲಿ ಸರ್ಕಾರದಲ್ಲಿ ನೇರ ನೇಮಕಾತಿ ಬಗ್ಗೆ ಕೆಲವು ತಿದ್ದುಪಡಿಗಳು ಆದ ನಂತರ ಆಯೋಗಕ್ಕೆ ನೇರ ನೇಮಕಾತಿ ಅಥವಾ ನಿಯೋಜನೆಯ ಮೂಲಕ ನೌಕರರನ್ನು ನೇಮಿಸಿಕೊಳ್ಳುವ ಬಗ್ಗೆ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದು ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಕೂಡಲೇ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಿ ಹೊರಗುತ್ತಿಗೆ ಏಜೆನ್ಸಿ ನೇಮಕಕ್ಕೆ ಶೀಘ್ರ ಕ್ರಮ ಕೈಗೊಳ್ಳುವಂತೆ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಸೂಚನೆ ನೀಡಿದರು. ಇದಕ್ಕೆ ಮುಖ್ಯ ಮಾಹಿತಿ ಆಯುಕ್ತರು ಸಹ ಒಪ್ಪಿ ಕಾರ್ಯದರ್ಶಿಯವರಿಗೆ ಮುಂದಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ನಿರ್ಣಯ : **ಹೊರಗುತ್ತಿಗೆ ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ಶೀಘ್ರವಾಗಿ ಟೆಂಡರ್ ಕರೆಯುವುದು.**

ಕ್ರಮ : **ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ, ಅಕೌಂಟ್ಸ್ ಸೂಪರಿಂಟೆಂಡೆಂಟ್, ಶಾಖಾಧಿಕಾರಿ.**

## 3. ವಾರ್ಷಿಕ ವರದಿ :

ವಾರ್ಷಿಕ ವರದಿಯ ಬಗ್ಗೆ ಪ್ರಸ್ತಾಪಿಸಿದ ಆಯೋಗದ ಕಾರ್ಯದರ್ಶಿಗಳು ಈಗಾಗಲೇ ಎಲ್ಲಾ ಆಯುಕ್ತರುಗಳಿಗೆ ಅಂತಿಮ ಕರಡು ಪ್ರತಿಯನ್ನು ಸಲ್ಲಿಸಲಾಗಿದ್ದು, ಈ ಬಗ್ಗೆ ಸಭೆಯ ಅಭಿಪ್ರಾಯಗಳನ್ನು ಕೋರಿದರು. ಇದಕ್ಕೆ ಸ್ಪಂದಿಸಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು, ಶ್ರೀ ಡಿ.ತಂಗರಾಜ್‌ರವರು, ಶ್ರೀ ಟಿ.ರಮಾನಾಯಕ್‌ರವರುಗಳು ವರದಿಯಲ್ಲಿ ಕೆಲವೊಂದು ತಪ್ಪುಗಳಿದ್ದು ಅವುಗಳನ್ನು ಸರಿಪಡಿಸಬೇಕೆಂದು ಸೂಚಿಸಿದರು. ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ವಾರ್ಷಿಕ ವರದಿಯನ್ನು ಆಯೋಗದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಯವರ ಸಹಕಾರದೊಂದಿಗೆ ಸಿದ್ದಪಡಿಸುವಂತೆ ಸೂಚನೆ ನೀಡಿದರು.

ತದನಂತರ ಮಾತನಾಡಿದ ಮುಖ್ಯ ಮಾಹಿತಿ ಆಯುಕ್ತರು ವಾರ್ಷಿಕ ವರದಿಯ ಗಂಭೀರತೆಯನ್ನು ತಿಳಿಸುತ್ತಾ, ವಾರ್ಷಿಕ ವರದಿಯಲ್ಲಿರುವ ಎಲ್ಲಾ ನ್ಯೂನತೆಗಳನ್ನು ಹಾಗೂ ಲೋಪದೋಷಗಳನ್ನು ಸರಿಪಡಿಸಿ ಪರಿಷ್ಕೃತ ವಾರ್ಷಿಕ ವರದಿಯ ಕರಡು ಪ್ರತಿಯನ್ನು ಶೀಘ್ರದಲ್ಲಿ ಸಲ್ಲಿಸುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು.

ನಿರ್ಣಯ : **ವಾರ್ಷಿಕ ವರದಿಯ ಅಂತಿಮ ಕರಡು ಪ್ರತಿಯಲ್ಲಿನ ಲೋಪದೋಷಗಳನ್ನು ಸರಿಪಡಿಸುವುದು. ವಾರ್ಷಿಕ ವರದಿಯನ್ನು ಆಯೋಗದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಯವರ ಸಹಕಾರದೊಂದಿಗೆ ಸಿದ್ಧಪಡಿಸುವುದು. ವಾರ್ಷಿಕ ವರದಿಯನ್ನು ಕಾರ್ಯದರ್ಶಿಗಳ ಮೇಲುಸ್ತುವಾರಿಯಲ್ಲಿ ಉತ್ತಮ ರೀತಿಯಲ್ಲಿ ತಯಾರಿಸುವುದು ಮತ್ತು ಶೀಘ್ರದಲ್ಲಿ ಪರಿಷ್ಕೃತ ಅಂತಿಮ ಕರಡು ವಾರ್ಷಿಕ ವರದಿಯನ್ನು ಮಂಡಿಸುವುದು.**

ಕ್ರಮ : **ಕಾರ್ಯದರ್ಶಿ, ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಅಸಿಸ್ಟೆಂಟ್ ಸ್ಟಾಟಿಸ್ಟಿಕಲ್ ಆಫೀಸರ್, ಅಧೀನಕಾರ್ಯದರ್ಶಿ, ಶಾಖಾಧಿಕಾರಿ.**

## 4. ದಿನಾಂಕ: 4.9.2013ರಂದು ನವದೆಹಲಿಯಲ್ಲಿ ನಡೆಯುವ ಕೇಂದ್ರ ಮಾಹಿತಿ ಆಯೋಗದ ಅರ್ಧದಿನದ ಕಲಾಪದ ಕುರಿತು :

ಈ ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಗಳು, ನವದೆಹಲಿಯಲ್ಲಿ ನಡೆಯುವ ಕೇಂದ್ರ ಮಾಹಿತಿ ಆಯೋಗದ ವಾರ್ಷಿಕ ಸಭೆಯ ಬಗ್ಗೆ ಈಗಾಗಲೇ ತಿಳಿದಿದ್ದು, ದಿನಾಂಕ: 4.9.2013ರಂದು ಅರ್ಧ ದಿನದ ಕಲಾಪವನ್ನು ಏರ್ಪಡಿಸಿದ್ದು ಇದರಲ್ಲಿ ಭಾಗವಹಿಸುವ ಮತ್ತು ಸಲಹೆ / ಶಿಫಾರಸ್ಸುಗಳನ್ನು ನೀಡುವಂತೆ ಕೇಂದ್ರ

ಮಾಹಿತಿ ಆಯೋಗದಿಂದ ಪತ್ರ ಬಂದಿದ್ದು ಈಗಾಗಲೇ ಪತ್ರವನ್ನು ಎಲ್ಲಾ ಆಯುಕ್ತರಿಗೆ ತಲುಪಿಸಲಾಗಿದ್ದು, ಈ ಬಗ್ಗೆ ಸಭೆಯ ಅಭಿಪ್ರಾಯಗಳನ್ನು ಕೋರಿದರು.

ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಮೊದಲಿಗೆ ದಿನಾಂಕ: 3.9.2013ಕ್ಕೆ ಉದ್ದೇಶಿತ ಪ್ರವಾಸ ಕಾರ್ಯಕ್ರಮವು ಮುಕ್ತಾಯಗೊಳ್ಳಲಿದ್ದು ಹೆಚ್ಚುವರಿಯಾಗಿ ಇನ್ನೊಂದು ದಿನ ದೆಹಲಿಯಲ್ಲಿಯೇ ವಾಸ್ತವ್ಯವಿದ್ದು ದಿನಾಂಕ: 4.9.2013ರ ಕಲಾಪದಲ್ಲಿ ಭಾಗವಹಿಸಲು ಎಲ್ಲಾ ಆಯುಕ್ತರುಗಳು ಒಪ್ಪಿಗೆ ನೀಡಿದರು.

ದಿನಾಂಕ: 4.9.2013ರ ಕಲಾಪಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗುವ ವಿಷಯಗಳನ್ನು ದಿನಾಂಕ: 7.8.2013ರೊಳಗೆ ಕೇಂದ್ರ ಮಾಹಿತಿ ಆಯೋಗಕ್ಕೆ ನೀಡಬೇಕಾಗಿರುವುದರಿಂದ ಇನ್ನೆರಡು ದಿನಗಳಲ್ಲಿ ಎಲ್ಲಾ ಆಯುಕ್ತರುಗಳು ಚರ್ಚಿಸಲು ಇಚ್ಚಿಸುವ ವಿಷಯಗಳ ಬಗ್ಗೆ ಟಿಪ್ಪಣಿಯನ್ನು ನೀಡುವಂತೆ ಹಾಗೂ 7.8.2013ರೊಳಗಾಗಿ ಈ ಬಗ್ಗೆ ಎಲ್ಲಾ ಆಯುಕ್ತರುಗಳು ಸೇರಿ ನಿರ್ಣಯ ತೆಗೆದುಕೊಳ್ಳಬೇಕೆಂದು ಮುಖ್ಯ ಮಾಹಿತಿ ಆಯುಕ್ತರು ಸೂಚಿಸಿದರು.

ನಿರ್ಣಯ : **ಕೇಂದ್ರ ಮಾಹಿತಿ ಆಯೋಗದ ವಾರ್ಷಿಕ ಸಭೆಯ ಮುಂದುವರೆದ ಭಾಗವಾಗಿ ದಿನಾಂಕ: 4.9.2013ರಂದು ಹೆಚ್ಚುವರಿಯಾಗಿ ಒಂದು ದಿನ ಪ್ರವಾಸ ಕಾರ್ಯಕ್ರಮವನ್ನು ವಿಸ್ತರಿಸಿ, 4.9.2013ರಂದು ನಡೆಯುವ ಅರ್ಧ ದಿನದ ಕಲಾಪದಲ್ಲಿ ಕರ್ನಾಟಕ ಮಾಹಿತಿ ಆಯೋಗದ ಎಲ್ಲಾ ಆಯುಕ್ತರುಗಳು ಭಾಗವಹಿಸುವುದು ಮತ್ತು ಸದರಿ ಸಭೆಯಲ್ಲಿ ಚರ್ಚಿಸುವ ವಿಷಯಗಳ ಕುರಿತಂತೆ ದಿನಾಂಕ: 7.8.2013ರೊಳಗಾಗಿ ಎಲ್ಲಾ ಆಯುಕ್ತರೊಂದಿಗೆ ಚರ್ಚಿಸಿ ತೀರ್ಮಾನಿಸುವುದು.**

ಕ್ರಮ : ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿ, ಶಾಖಾಧಿಕಾರಿ.

## 5. ಅಧ್ಯಕ್ಷರ ಒಪ್ಪಿಗೆ ಮೇರೆಗೆ ಇತರೆ ವಿಷಯಗಳು :

1. **ಶ್ರೀ ಎ.ಆರ್.ಎಸ್.ಕುಮಾರ್ ಮತ್ತು ಎ.ಆರ್. ವಿಶ್ವನಾಥ್ ರವರು ನೀಡಿರುವ ಮನವಿ ಪತ್ರ ದಿನಾಂಕ 02/08/2013.**

ಈ ವಿಷಯವನ್ನು ಆಯೋಗದ ಕಾರ್ಯದರ್ಶಿಗಳು ಪ್ರಸ್ತಾಪಿಸಿದರು. ಶ್ರೀ ಎ.ಆರ್.ಎಸ್.ಕುಮಾರ್ ಮತ್ತು ಶ್ರೀ ಎ.ಆರ್.ವಿಶ್ವನಾಥ್ ರವರು ನೀಡಿರುವ ಮನವಿಯು ಈ ಕೆಳಕಂಡಂತಿರುತ್ತದೆ :

Sub : Requesting to hear our cases by Sri.AKM Nayak, Sri.D.Thangaraj, Sri.M.R.Poojar, Sri.Dr.Shekar D Sajjanar and Sri.T.R.Nayak.

With reference to the above we are request you to hear our cases, we don't have any objections and we respect the Commissioners and the Commission. We are working for the welfare of the society. Hence we are requesting the Chief Information Commissioner to issue directions to hear all the pending cases and new cases. I am sorry to Mr.Poojar Sir, on that day emotionally in the interest of rural people I insisted penalty on the P. I. O and I have not any disrespect to Sri.Poojar sir. Hence we are requesting all the above Commissioners to hear our cases as usual in the interest of Justice and equity.

ಸದರಿ ಮನವಿ ಪರಿಗಣಿಸಿ ಆಯೋಗವು ಕೆಳಗಿನಂತೆ ತೀರ್ಮಾನಿಸಿತು:-

1. ಈಗಾಗಲೇ ಹಂಚಿಕೆ ಮಾಡಲಾಗಿರುವ ಹಾಗೂ ಮುಂದೂಡಲ್ಪಟ್ಟ (ಪಾರ್ಟಹರ್ಡ) ಪ್ರಕರಣಗಳನ್ನು ಆಯಾ ನ್ಯಾಯಾಲಕ್ಕೆ ಹಿಂದಿರುಗುಸುವುದು.

2. ಸಂಬಂಧಪಟ್ಟ ನ್ಯಾಯಾಲಯಗಳು ಮುಂದಿನ ವಿಚಾರಣೆಯ ದಿನಾಂಕವನ್ನು ನಿಗಧಿಪಡಿಸಿದ ನಂತರ ಅರ್ಜಿದಾರರಿಗೆ ಹಾಗೂ ಪ್ರತಿವಾದಿಗಳಿಗೆ ನೋಟೀಸ್ ಜಾರಿಮಾಡುವುದು.
3. ಶ್ರೀ ಎ.ಆರ್.ಎಸ್. ಕುಮಾರ್ ಮತ್ತು ಶ್ರೀ ಎ.ಆರ್. ವಿಶ್ವನಾಥ್ ರವರುಗಳ ಹೊಸ ಪ್ರಕರಣಗಳನ್ನು ಹಂಚಿಕೆ ಮಾಡುವ ಪ್ರತಿ ಸಂದರ್ಭದಲ್ಲಿ ಎಲ್ಲಾ ಆಯುಕ್ತರುಗಳಿಗೆ, ಇತರೆ ಪ್ರಕರಣಗಳೊಂದಿಗೆ ಹಂಚಿಕೆ ಮಾಡಲು ಪ್ರಸ್ತಾಪಿಸುವುದು.

ಆಯುಕ್ತರಾದ ಡಾ. ಶೇಖರ್.ಡಿ. ಸಜ್ಜನಾರ್ ರವರು ಸಭೆಯಲ್ಲಿ ಹಾಜರಿಲ್ಲದಿದ್ದುದರಿಂದ ಅವರು ರಜೆಯಿಂದ ಹಿಂದಿರುಗಿದ ನಂತರ ಅವರ ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಾಗೂ ಹೊಸ ಪ್ರಕರಣಗಳನ್ನು ವಹಿಸುವ ಕುರಿತ. ಅವರ ಅಭಿಪ್ರಾಯವನ್ನು ಪಡೆದು ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವುದು.

**ಕ್ರಮ: ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿ, ಶಾಖಾಧಿಕಾರಿ,**

2. **ಪ್ರಾಜೆಕ್ಟ್ ಲೊಕೇಟರ್** : ವಿಷಯವನ್ನು ಕಾರ್ಯದರ್ಶಿಗಳು ಸಭೆಯ ಮುಂದೆ ಮಂಡಿಸುತ್ತಾ ಈ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು ಎನ್.ಐ.ಸಿಯವರ ಸಲಹೆಯ ಮೇರೆಗೆ ಕ್ರಮ ಕೈಗೊಂಡಿದ್ದು, ಅದಕ್ಕೆ ಬೇಕಾಗಿರುವ ಅಗತ್ಯ ಸ್ಪೇಸ್ / ಪ್ರತ್ಯೇಕ ಸರ್ವರ್ ಅನ್ನು ಒದಗಿಸುವ ಬಗ್ಗೆ ಪತ್ರ ಬರೆಯಲಾಗಿದ್ದು, 'ಇ' ಆಡಳಿತ ಸರ್ವರ್‌ನೊಂದಿಗೆ 'ಲಿಂಕ್' ಪಡೆದುಕೊಳ್ಳುವ ಕಾರ್ಯವೂ ಪ್ರಗತಿಯ ಹಂತದಲ್ಲಿದೆ ಎಂದು ಸಭೆಗೆ ತಿಳಿಸಿದರು.

3. **ಆಯೋಗದ ನೂತನ ಕಟ್ಟಡ** : ಕಟ್ಟಡದ. ಕಾರ್ಯವು ಪ್ರಗತಿಯ ಹಂತದಲ್ಲಿರುವುದಾಗಿ ತಿಳಿಸಿದ ಕಾರ್ಯದರ್ಶಿಗಳ ಉತ್ತರಕ್ಕೆ ಸಂಬಂಧಿಸಿದಂತೆ ಮುಖ್ಯ ಮಾಹಿತಿ ಆಯುಕ್ತರು ಕಾರ್ಯದರ್ಶಿಗಳು ಹಾಗೂ ಆಯುಕ್ತರಾದ ಶ್ರೀ ಜೆ.ಎಸ್. ವಿರೂಪಾಕ್ಷಯ್ಯರವರನ್ನು ಈ ಬಗ್ಗೆ ಪರಿಶೀಲನೆ ಮಾಡುವಂತೆ ಸೂಚಿಸಿದರು.

4. **ಮಿಥಿಕ್ ಸೊಸೈಟಿಯಲ್ಲಿನ ಕೋರ್ಟ್ ಹಾಲ್‌ಗಳಿಗೆ ಸ್ಕ್ಯಾನರ್ ಒದಗಿಸುವ ಬಗ್ಗೆ** : ವಿಷಯ ಪ್ರಸ್ತಾಪಿಸಿದ ಕಾರ್ಯದರ್ಶಿಗಳು ಈಗಾಗಲೇ ಮಿಥಿಕ್ ಸೊಸೈಟಿಯಲ್ಲಿರುವ ಕೋರ್ಟ್ ಹಾಲ್‌ಗಳಿಗೆ ಪ್ರಿಂಟರ್ ಕಂ ಸ್ಕ್ಯಾನರ್‌ಗಳನ್ನು ಒದಗಿಸಲಾಗಿದ್ದು, ಆಯಾ ದಿನದ ಆದೇಶಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವ ಬಗ್ಗೆ ಅಲ್ಲಿನ ಸಿಬ್ಬಂದಿಗೆ ಒಂದೆರಡು ದಿನ ತರಬೇತಿ ಹಾಗೂ ಸೂಕ್ತ ಮಾರ್ಗದರ್ಶನ ನೀಡಿ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗುವುದು ಎಂದು ತಿಳಿಸಿದರು.

**ಕ್ರಮ: ಶ್ರೀಮತಿ ಕಾವ್ಯ ಪ್ರೋಗ್ರಾಮರ್ ತರಬೇತಿ ನೀಡುವುದು. ಎ.ಎಸ್.ಒ. ಹಾಗೂ ಶಾಖಾಧಿಕಾರಿ ಇದನ್ನು ಮೇಲ್ವಿಚಾರಣೆ ಮಾಡುವುದು.**

5. **ಆಯೋಗದ ಕಾನೂನು ಅಧಿಕಾರಿಯ ಸೇವಾ ಅವಧಿಯ ವಿಸ್ತರಣೆ** : ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಗಳು ಈ ಬಗ್ಗೆ ಸಚಿವ ಸಂಪುಟ ಟಿಪ್ಪಣಿಯನ್ನು ಸಿಆಸು.ಇಲಾಖೆ (ಜನಸ್ಪಂದನ)ದಲ್ಲಿ ಸಿದ್ಧಪಡಿಸಿದ್ದು, ಅದನ್ನು ಸಚಿವ ಸಂಪುಟದ ಮುಂದೆ ಮಂಡಿಸಿ ಅಂತಿಮ ಆದೇಶ ನೀಡುವುದಾಗಿ ಅಲ್ಲದೆ ಕಾನೂನು ಅಧಿಕಾರಿಗಳ ಸೇವೆಯನ್ನು ಮುಂದುವರೆಸಬೇಕಾಗಿದ್ದ ದಿನಾಂಕದಿಂದಲೆ ಪೂರ್ವಾನ್ವಯವಾಗಿ ಮುಂದುವರೆಸುವುದಾಗಿ ಸಿ.ಆ.ಸು.ಇ ಇಲಾಖೆಯ ಅಧಿಕಾರಿಗಳು ತಿಳಿಸಿರುವುದಾಗಿ ಸಭೆಗೆ ತಿಳಿಸಿದರು. ಸರ್ಕಾರದಿಂದ ಆದೇಶ ಬರುವವರೆಗೆ ಕಾನೂನು ಅಧಿಕಾರಿರವರು ಮುಂದುವರೆಯಬಹುದೆಂದು ಸಭೆ ತೀರ್ಮಾನಿಸಿತು.

ನಿರ್ಣಯ : **ಕಾನೂನು ಅಧಿಕಾರಿಯ ಸೇವೆಯನ್ನು ವಿಸ್ತರಿಸುವ ಬಗ್ಗೆ ಸರ್ಕಾರದ ಆದೇಶ ನಿರೀಕ್ಷಿಸಿ ಕಾನೂನು ಅಧಿಕಾರಿಯವರ ಸೇವೆ ಮುಂದುವರೆಸುವುದು.**

ಕ್ರಮ : **ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿ, ಶಾಖಾಧಿಕಾರಿ.**

ಮೇಲಿನ ಎಲ್ಲಾ ಅಂಶಗಳ ಬಗ್ಗೆ ಸೂಕ್ತ ಹಾಗೂ ಶೀಘ್ರ ಕ್ರಮ ಕೈಗೊಳ್ಳುವಂತೆ ಮುಖ್ಯ ಮಾಹಿತಿ ಆಯುಕ್ತರು ಕಾರ್ಯದರ್ಶಿಯವರಿಗೆ ಸೂಚನೆ ನೀಡುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

*******

ಮುಖ್ಯ ಮಾಹಿತಿ ಆಯುಕ್ತರು